ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ 49 /ಬೋ ಸ್ಸ ನಿ /2023-24 /ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 17/11/2023.

## ಸುತ್ತೋಲೆ

ವಿಷಯ: ಇಎಂಐಎಸ್ ತಂತ್ರಾಂಶದಲ್ಲಿ ಬೋಧಕರ ವಿವರಗಳನ್ನು UPDATE ಮಾಡುವ ಬಗ್ಗೆ.

*******

ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪ್ರಾಧ್ಯಾಪಕರು, ಸಹ/ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರ ಮಾಹಿತಿಯನ್ನು ಈಗಾಗಲೇ EMIS ತಂತ್ರಾಂಶದಲ್ಲಿ ದಾಖಲಿಸಿದ್ದು, ಸದರಿ ವಿವರಗಳನ್ನು ಸಂಬಂಧಪಟ್ಟ ಎಲ್ಲಾ ಬೋಧಕರ ಗಮನಕ್ಕೆ ತಂದು ಆ ವಿವರಗಳಲ್ಲಿ ಯಾವುದಾದರೂ ನ್ಯೂನತೆಗಳಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ವೈಯಕ್ತಿಕ ಗಮನಹರಿಸಿ, ಕೋರಿರುವ ಸಂಪೂರ್ಣ ಮಾಹಿತಿಯನ್ನು ನಿಖರವಾಗಿ ದಿನಾಂಕ: 20-11-2023ರ ಒಳಗಾಗಿ ಕಡ್ಡಾಯವಾಗಿ EMIS ತಂತ್ರಾಶದಲ್ಲಿ UPDATE ಮಾಡಲು ಹಾಗೂ ಈಗಾಗಲೇ ಅಪ್‌ಲೋಡ್ ಮಾಡಲಾಗಿರುವ ಮಾಹಿತಿಗಳು ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸಂಬಂಧಪಟ್ಟ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ. ಮಾಹಿತಿಯನ್ನು UPDATE ಮಾಡುವಾಗ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಗಮನಿಸತಕ್ಕದ್ದು.

- 2023ರ ಆಗಸ್ಟ್ ನಲ್ಲಿ ವರ್ಗಾವಣೆಗೊಂಡ/ ಹುದ್ದೆಸಹಿತ ಸ್ಥಳಾಂತರಗೊಂಡ ಬೋಧಕರ ಸೇವಾ ವಿವರಗಳನ್ನು ಕಡ್ಡಾಯವಾಗಿ ತಪ್ಪಿಲ್ಲದಂತೆ ನಮೂದಿಸುವುದು.

- ಬೋಧಕ ಸಿಬ್ಬಂದಿ ವರ್ಗದವರ ಹೆಸರು, ಜನ್ಮ ದಿನಾಂಕ, ನೇಮಕಾತಿ ಹೊಂದಿದ ದಿನಾಂಕ ಹಾಗೂ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕವನ್ನು (dd-mm-yyyy), ಸೇವಾಜೇಷ್ಠತೆ ಕ್ರಮ ಸಂಖ್ಯೆ, ವಿವರಗಳನ್ನು ಮತ್ತೊಮ್ಮೆ ಖಚಿತಪಡಿಸಿಕೊಂಡು ತಪ್ಪಿದ್ದಲ್ಲಿ ಸರಿಪಡಿಸುವುದು.

- ವಯೋನಿವೃತ್ತಿ/ಸ್ವಇಚ್ಛಾನಿವೃತ್ತಿ/ರಾಜೀನಾಮೆ/ಅನ್ಯ ಇಲಾಖೆಗಳಿಗೆ ನೇಮಕಾತಿ ಹೊಂದಿದ/ ವಜಾ/ಮರಣ ಇತ್ಯಾದಿ ಕಾರಣಗಳಿಂದ ಸರ್ಕಾರಿ/ಇಲಾಖಾ ಸೇವೆಯಿಂದ ಬಿಡುಗಡೆ ಹೊಂದಿದ/ ತೆಗೆದುಹಾಕಲ್ಪಟ್ಟ ನೌಕರರ ಮಾಹಿತಿಯನ್ನು ತಕ್ಷಣ EMISನಿಂದ ಕಡ್ಡಾಯವಾಗಿ ತೆಗೆದು ಹಾಕುವುದು **(Delete)**.

- ಖಾಸಗಿ ಅನುದಾನಿತ ಕಾಲೇಜಿನಿಂದ ಮರುಹಂಚಿಕೆ ಹೊಂದಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ ಬೋಧಕೇತರರ ವಿವರಗಳನ್ನು ಇ.ಎಂ.ಐ.ಎಸ್.ನಲ್ಲಿ **Re-deployed from Private Aided College** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

**ಮೇಲೆ ತಿಳಿಸಿರುವ ಸಂಪೂರ್ಣ ವಿವರಗಳು ಇಲಾಖೆಯ ದೈನಂದಿನ ಆಡಳಿತ ನಿರ್ವಹಣೆಗೆ ಅತಿ ಪ್ರಮುಖವಾದ ದಾಖಲೆಗಳಾಗಿದ್ದು, ಅವುಗಳನ್ನು ಇ.ಎಂ.ಐ.ಎಸ್.ನಲ್ಲಿ Upload ಮಾಡುವಾಗ ಉದಾಸೀನತೆ ತೋರಿದಲ್ಲಿ ಅಥವಾ ತಪ್ಪು ಮಾಹಿತಿಗಳನ್ನು Upload ಮಾಡಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಿ, ಸಿ.ಸಿ.ಎ. ನಿಯಮಾವಳಿಗಳ ಪ್ರಕಾರ ಶಿಸ್ತುಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.**

(ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

17/11/23

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ:

1. ಎಲ್ಲಾ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಜಂಟಿ ನಿರ್ದೇಶಕ ಕಛೇರಿಗಳಿಗೆ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಪ್ರಭಾರ ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು-ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು ಹಾಗೂ ಮೇಲ್ಕಂಡ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಲು ಅವಕಾಶ ಮಾಡಿಕೊಡಲು.
4. ಕಛೇರಿ ಪ್ರತಿ.